## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 1542/2022 ಸಿಡಬ್ಲೂ : 5 ಪಿಡಬ್ಲೂಃ 4

ಪ್ರಮಾಣವಚನ ಬೋಧಿಸಲಾಯಿತು ದಿಃ 09-05-2025

ಹೆಸರು : ಬಸವಲಿಂಗಪ್ಪ

ತಂದೆ ಹೆಸರು : ಸಂಗಣ್ಣ

ವಯಸ್ಸು : 40 ವರ್ಷ

ಉದ್ಯೋಗ : ಮುಖ್ಯ ಪೇದೆ ಕುರುಕುಂಟಾ ಪೊಲೀಸ್ ಠಾಣೆ

ವಾಸಸ್ಥಳ : ಕುರುಕುಂಟಾ

**: ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :**

ದಿ.03-04-2020 ರಿಂದ ಇಲ್ಲಿಯ ವರೆಗೂ ಕುರುಕುಂಟಾ ಪೊಲೀಸ್ ಠಾಣೆಯಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ.

ದಿಃ 23-05-2022 ರಂದು ಸಂಜೆ 04-40 ಗಂಟೆಗೆ ಸುಮಾರಿಗೆ ಠಾಣೆಯಲ್ಲಿದ್ದಾಗ ಚಾ ಸಾ 1 ರವರು ಒಂದು ದಾಳಿ ಮಾಡುವುದು ಇದೆ ಅಂತ ಹೇಳಿ ನನಗೆ ಹಾಗೂ ಚಾ ಸಾ 4, 6 ಮತ್ತು 7 ರವರಿಗೆ ಹಾಗೂ ಚಾ ಸಾ 2 ಮತ್ತು 3 ರವರಿಗೆ ಕರೆಸಿದರು. ನಂತರ ನಾವು 04-45 ಗಂಟೆಗೆ ಠಾಣೆಯಿಂದ ಸರ್ಕಾರಿ ಜೀಪು ನಂ. ಕೆ ಎ 32 ಜಿ 717 ಮುಖಾಂತರ ಹೊರಟು ಘಟನಾ ಸ್ಥಳಕ್ಕೆ ಸುಮಾರು ಸಮಯ 05-05 ಗಂಟೆ ತಲುಪಿದ್ದೆವು. ನಂತರ ನಾವು ರೈಲ್ವೆ ಗೇಟು ಹತ್ತಿರ ಸ್ವಲ್ಪ ಮರೆಯಲ್ಲಿ ನಿಂತು ನೋಡಲಾಗಿ ಇಬ್ಬರು ವ್ಯಕ್ತಿ ಸೇಂದಿ ಮಾರಾಟ ಮಾರುತ್ತಿದ್ದರು ಸದರಿಯವರು ನಮ್ಮನ್ನು ಸಮವಸ್ತ್ರದಲ್ಲಿ ನೋಡಿ ಓಡಿ ಹೋಗಿರುತ್ತಾನೆ. ನಂತರ ನಾವೆಲ್ಲರು ಸದರಿ ವ್ಯಕ್ತಿಯ ಹೆಸರು ಮತ್ತು ವಿಳಾಸ ಕೇಳಲಾಗಿ ಸದರಿಯವರು ಹೆಸರು ರಾಘವೇಂದ್ರ ಮತ್ತು ಮಲ್ಲಪ್ಪ ಎಂದು ತಿಳಿದು ಬಂದಿರುತ್ತದೆ. ನಂತರ ನಾವು ಘಟನಾ ಸ್ಥಳದಲ್ಲಿ ಪರಿಶೀಲನೆ ಮಾಡಿ ನೋಡಲಾರಿ ಅಲ್ಲಿಗೆ ಒಂದು ನೀಲಿ ಬಣ್ಣದ ಬಾರಲ್ ಇದ್ದು ಅದರಲ್ಲಿ 50 ಲೀ. ನಷ್ಟು ಕಲಬೆರಕೆ ಸೇಂದಿ ಇರುತ್ತದೆ ಹಾಗೂ 2 ಕೆಂಪು ಬಣ್ಣದ ಜಗ್ಗು ಇರುತ್ತದೆ. ಅದರ ಒಟ್ಟು ಅಂದಾಜು ರೂ.530/- ಕಿಮ್ಮತ್ತು ಇರುತ್ತದೆ. ನಂತರ ನಾವು ಚಾ ಸಾ 2 ಮತ್ತು 3 ರವರ ಸಮಕ್ಷಮ ಸುಮಾರು 05-10 ರಿಂದ 06-10 ಗಂಟೆಯ ವರೆಗೆ ಪಂಚನಾಮೆಯನ್ನು ಮಾಡಿ ಮು ಮಾ ವಶಕ್ಕೆ ಪಡೆದುಕೊಂಡಿರುತ್ತೇವೆ. ಮು ಮಾ ನ್ನು ಠಾಣೆಗೆ ತಗೆದುಕೊಂಡು ಬಂದಿದ್ದೆವು. ನಂತರ ಠಾಣೆಗೆ ಬಂದು 2 ಲೀ. ಸೇಂದಿಯನ್ನು 2 ಬಾಟಲಿನಲ್ಲಿ ಪ್ರತ್ಯೇಕವಾಗಿ ರಾಸಾಯನಿಕ ಪರೀಕ್ಷೆ ಕುರಿತು ಜಪ್ತಿ ಪಡಿಸಿಕೊಂಡು ಅದರ ಮೇಲೆ KKT ಅಂತಾ ಇಂಗ್ಲೀಷ್ ಅಕ್ಷರದಿಂದ ಸೀಲು ಮಾಡಿರುತ್ತೇನೆ. ಠಾಣೆಯಲ್ಲಿದ್ದ ಠಾಣಾಧಿಕಾರಿ ಮುಂದಿನ ತನಿಖೆಯನ್ನು ಕೈಗೊಂಡಿರುತ್ತಾರೆ. (ಈ ದಿನ ಆರೋಪಿತರು

ಗೈರು ಹಾಜರು ಇರುತ್ತಾರೆ ಆರೋಪಿತರ ಹಾಜರಾತಿಯ ವಿನಾಯಿತಿಯ ಅರ್ಜಿಯನ್ನು ಸಲ್ಲಿಸಿರುತ್ತಾರೆ ಮತ್ತು ಆರೋಪಿತರ ಗುರುತಿನ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ವಾದ ಮಂಡಿಸಿರುತ್ತಾರೆ.)

**ಪಾಟೀಸವಾಲುಃ** ಆರೋಪಿ ಪರ ಶ್ರೀ ಬಿ ಟಿ ವಕೀಲರಿಂದಃ

ಕುರುಕುಂಟಾ ಪೋಲೀಸ್ ಠಾಣೆಯಲ್ಲಿ ಕ್ರೈಂ ರೇಟು ಬಹಳ ಕಡಿಮೆ ಇದೆ ಎಂದರೆ ಸರಿ. ಕುರುಕುಂಟಾ ಪೋಲೀಸ್ ಠಾಣೆಗೆ ಘಟನಾ ನಡೆದ ಇಸವಿಯಲ್ಲಿ ಯಾವುದೇ ವಾಹನ ಲಭ್ಯ ಮಾಡಿಕೊಟ್ಟಿಲ್ಲ ಎಂದರೆ ಸರಿಯಿಲ್ಲ.

ದಿಃ 23-05-2022 ರಂದು ಸಂಜೆ 04-40 ಗಂಟೆಗೆ ಸುಮಾರಿಗೆ ಠಾಣೆಯಲ್ಲಿದ್ದಾಗ ಚಾ ಸಾ 1 ರವರು ಒಂದು ದಾಳಿ ಮಾಡುವುದು ಇದೆ ಅಂತ ಹೇಳಿ ನನಗೆ ಹಾಗೂ ಚಾ ಸಾ 4, 6 ಮತ್ತು 7 ರವರಿಗೆ ಹಾಗೂ ಚಾ ಸಾ 2 ಮತ್ತು 3 ರವರಿಗೆ ಕರೆಸಿದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ನಾವು 04-45 ಗಂಟೆಗೆ ಠಾಣೆಯಿಂದ ಸರ್ಕಾರಿ ಜೀಪು ನಂ. ಕೆ ಎ 32 ಜಿ 717 ಮುಖಾಂತರ ಹೊರಟು ಘಟನಾ ಸ್ಥಳಕ್ಕೆ ಸುಮಾರು ಸಮಯ 05-05 ಗಂಟೆ ತಲುಪಿದ್ದೆವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ನಾವು ರೈಲ್ವೆ ಗೇಟು ಹತ್ತಿರ ಸ್ವಲ್ಪ ಮರೆಯಲ್ಲಿ ನಿಂತು ನೋಡಲಾಗಿ ಇಬ್ಬರು ವ್ಯಕ್ತಿ ಸೇಂದಿ ಮಾರಾಟ ಮಾರುತ್ತಿದ್ದರು ಸದರಿಯವರು ನಮ್ಮನ್ನು ಸಮವಸ್ತ್ರದಲ್ಲಿ ನೋಡಿ ಓಡಿ ಹೋಗಿರುತ್ತಾನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ನಾವೆಲ್ಲರು ಸದರಿ ವ್ಯಕ್ತಿಯ ಹೆಸರು ಮತ್ತು ವಿಳಾಸ ಕೇಳಲಾಗಿ ಸದರಿಯವರು ಹೆಸರು ರಾಘವೇಂದ್ರ ಮತ್ತು ಮಲ್ಲಪ್ಪ ಎಂದು ತಿಳಿದು ಬಂದಿರುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ನಾವು ಘಟನಾ ಸ್ಥಳದಲ್ಲಿ ಪರಿಶೀಲನೆ ಮಾಡಿ ನೋಡಲಾರಿ ಅಲ್ಲಿಗೆ ಒಂದು ನೀಲಿ ಬಣ್ಣದ ಬಾರಲ್ ಇದ್ದು ಅದರಲ್ಲಿ 50 ಲೀ. ನಷ್ಟು ಕಲಬೆರಕೆ ಸೇಂದಿ ಇರುತ್ತದೆ ಹಾಗೂ 2 ಕೆಂಪು ಬಣ್ಣದ ಜಗ್ಗು ಇರುತ್ತದೆ. ಅದರ ಒಟ್ಟು ಅಂದಾಜು ರೂ.530/- ಕಿಮ್ಮತ್ತು ಇರುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ನಾವು ಚಾ ಸಾ 2 ಮತ್ತು 3 ರವರ ಸಮಕ್ಷಮ ಸುಮಾರು 05-10 ರಿಂದ 06-10 ಗಂಟೆಯ ವರೆಗೆ ಪಂಚನಾಮೆಯನ್ನು ಮಾಡಿ ಮು ಮಾ ವಶಕ್ಕೆ ಪಡೆದುಕೊಂಡಿರುತ್ತೇವೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಮು ಮಾ ನ್ನು ಠಾಣೆಗೆ ತಗೆದುಕೊಂಡು ಬಂದಿದ್ದವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ಠಾಣೆಗೆ ಬಂದು 2 ಲೀ. ಸೇಂದಿಯನ್ನು 2 ಬಾಟಲಿನಲ್ಲಿ ಪ್ರತ್ಯೇಕವಾಗಿ ರಾಸಾಯನಿಕ ಪರೀಕ್ಷೆ ಕುರಿತು ಜಪ್ತಿ ಪಡಿಸಿಕೊಂಡು ಅದರ ಮೇಲೆ KKT ಅಂತಾ ಇಂಗ್ಲೀಷ್ ಅಕ್ಷರದಿಂದ ಸೀಲು ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಠಾಣೆಯಲ್ಲಿದ್ದ ಠಾಣಾಧಿಕಾರಿ ಮುಂದಿನ ತನಿಖೆಯನ್ನು ಕೈಗೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

ಘಟನಾ ಸ್ಥಳದ ಪೂರ್ವ ದಿಕ್ಕಿಗೆ ಮದಕಲ್ ಗ್ರಾಮಕ್ಕೆ ಹೋಗುವ ರಸ್ತೆ, ಪಶ್ಚಿಮ ದಿಕ್ಕಿಗೆ ಸಿ ಸಿ ಐ ಕಾಲೋನಿ, ಉತ್ತರಕ್ಕೆ ಕುರುಕುಂಟಾಗ್ರಾಮಕ್ಕೆ ಹೋಗುವ ರಸ್ತೆ, ದಕ್ಷಿಣ ದಿಕ್ಕಿಗೆ ಸುರೇಶ್ ಎಂಬುವವರ ಮನೆ ಇರುತ್ತದೆ. ಘಟನಾ ಸ್ಥಳದಿಂದ ಸಿ ಸಿ ಐ ಕಾಲೋನಿ ಸುಮಾರು 3 ಕಿ ಮಿ ಅಂತರದಲ್ಲಿದೆ ಎಂದರೆ ಸಾಕ್ಷಿಯು 1 ರಿಂದ 1.5 ಕಿ ಮೀ ಅಂತರದಲ್ಲಿ ಇದೆ ಎಂದು ನುಡಿಯುತ್ತಾರೆ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**